ಮೈಸೂರ ಗೆಜಿಟ್.

ನಂ. 42] ಸರಕಾರದಿಂದ ಪ್ರಕಟಣೆ ಆದ್ದು [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 12, ಸ॥ 1907

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು

ತಾರೀಖು 30ನೆ ನವೆಂಬರು 1907.

ಹುಕುಂ.—1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನ್ನನ್ನು ಪುನಃ ತಿದ್ದುಪಾಟು ಮಾಡುವ ಬಗ್ಗೆ ಹುಟ್ಟಿದ ಇದರಡಿ ಕಂಡ ಮಸೂದೆ ರೆಗ್ಯುಲೇಷನು 1907ನೆ ಇಸವಿಯ ನವೆಂಬರ್ 19ನೆ ತಾರೀಖಿನಲ್ಲಿ ಶ್ರೀವರ್ಮ ಮಹಾರಾಜರವರ ಅನುಮತಿಯನ್ನು ಹೊಂದಿ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸಲ್ಪಟ್ಟಿದೆ.

ಎಸ್. ಎಸ್. ಬಾಲಸುಂದರಂ ಐಯ್ಯರ್,
ಅಫಿಷಿಯೇಟಿಂಗ್ ಸೆಕ್ರಿಟರಿ.

1907ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್.

(1907ನೆ ಇಸವಿಯ ನವೆಂಬರ್ 19ನೆ ತಾರೀಖಿನಲ್ಲಿ ಮಂಜೂರ್ಮಾಡಲ್ಪಟ್ಟಿತು).

1899ನೆ ಇಸವಿಯ 2ನೆ ನಂಬರ್ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವ ರೆಗ್ಯುಲೇಷನ್.

ಪೀಠಿಕೆ.

1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀವರ್ಮ ಮಹಾರಾಜರವರು ಇದರಡಿ ಕಂಡಂತೆ ವಿಧಿಸಿರುತ್ತಾರೆ :—

1899ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫ್ ಯಾ ಪರಿಚ್ಛೇದದ ತಿದ್ದುಪಾಟು.

1. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿನ 2ನೆ ಪ್ಯಾರಗ್ರಾಫಿನ ಕೊನೆಯಲ್ಲಿ ಬರುವ "(47)" ಎಂಬ ಅಂಕೆಗೆ ಬದಲಾಗಿ "2. A." ಎಂಬ ಅಂಕೆಯನ್ನೂ ಅಕ್ಷರವನ್ನೂ ಸೇರಿಸತಕ್ಕದ್ದು.

94ನೆ ಮತ್ತು 95ನೆ ಪ್ಯಾರಗ್ರಾಫ್ ಯಾ ಪರಿಚ್ಛೇದಗಳನ್ನು ಸೇರಿಸುವುದು.

2. 1899ನೆ ಇಸವಿಯ ಮೈಸೂರು ಮಿಲಿಟರಿ ರೆಗ್ಯುಲೇಷನಿಗೆ ಇದರಡಿ ಕಂಡ ಪ್ಯಾರಗ್ರಾಫುಗಳನ್ನು ಸೇರಿಸತಕ್ಕದ್ದು :—

"94. ಬಂದು ತಕ್ಕೀರನ್ನು ಕುರಿತು ವಿಚಾರಣೆ ಮಾಡುವುದಕ್ಕೆ ಬಂದು ಕ್ರಿಮಿನಲ್ ಕೋರ್ಟಿಗೂ, ಮಿಲಿಟರಿ ಅಧಿಕಾರಿಗೂ ಅಧಿಕಾರವಿದ್ದಲ್ಲಿ ಈ ಪೈಕಿ ಯಾರ ಮುಂದೆ ವ್ಯವಹರಣೆಗಳು ನಡೆಯತಕ್ಕದ್ದೆಂಬುವುದನ್ನು ಸರ್ಕಾರದವರು ತಮ್ಮ ಯುಕ್ತಾನುಸಾರ ನಿಶ್ಚಯಿಸತಕ್ಕದ್ದು, ಮತ್ತು ಸದರಿ ವ್ಯವಹರಣೆಗಳು ಮಿಲಿಟರಿ ಅಧಿಕಾರಿಯ ಮುಂದೆ ನಡೆಯಬೇಕೆಂದು ಸರ್ಕಾರದವರು ನಿಶ್ಚಯಿಸಿದರೆ, ಆಪಾದಿಸಲ್ಪಟ್ಟ ಮನುಷ್ಯನು ಮಿಲಿಟರಿ ಪಹರೆಯಲ್ಲಿ ಇಡಲ್ಪಡತಕ್ಕದ್ದೆಂದು ಸರ್ಕಾರದವರು ತಮ್ಮ ಯುಕ್ತಾನುಸಾರ ವಿಧಿಸತಕ್ಕದ್ದು."

ಕೆಲವು ತಕ್ಕೀರುಗಳನ್ನು ಕುರಿತು ವಿಚಾರಣೆ ಮಾಡುವ ಅಧಿಕಾರ.

"95 (1). ನಡೆಯಿತೆಂದು ಹೇಳಲ್ಪಟ್ಟ ಯಾವುದಾದರೂ ತಕ್ಕೀರನ್ನು ಕುರಿತು ವಿಚಾರಣೆ ಮಾಡಲು ಅಧಿಕಾರವುಳ್ಳ ಕ್ರಿಮಿನಲ್ ಕೋರ್ಟಿನವರು, ತಮ್ಮ ಮುಂದೆ ವ್ಯವಹರಣೆಗಳು ನಡೆಯಬೇಕೆಂದು ಅಭಿಪ್ರಾಯಪಟ್ಟರೆ, ಅವರು ಬರವಣಿಗೆಯಲ್ಲಿ ನೋಟಿಸನ್ನು ಕೊಡುವುದರ ಮೂಲಕ ಯಾರ ತಾಬೆಯಲ್ಲಿ ಆಪಾದಿಸಲ್ಪಟ್ಟ ಮನುಷ್ಯನು ಇರುತ್ತಾನೆಯೋ ಆ ಆಫಿಸರನ್ನು, ಸದರಿ ಆಫಿಸರ ಇಷ್ಟಾನುಸಾರವಾಗಿ ಆಪಾದಿಸಲ್ಪಟ್ಟ ಮನುಷ್ಯನನ್ನು ನ್ಯಾಯಕಾರ್ಯ ವ್ಯವಹರಿಸಲ್ಪಡುವ ಬಗ್ಗೆ, ಅತ್ಯಂತ ಸಮೀಪದಲ್ಲಿರುವ ಮಾಜಿಸ್ಟ್ರೇಟಿಗೆ ಒಪ್ಪಿಸಬೇಕೆಂದಾಗಲಿ, ಅಥವಾ ಸರ್ಕಾರದವರಿಗೆ ಸದರಿ ವಿಷಯವನ್ನು ತಿಳಿಸಿಹಿಸುವ ತನಕ ವ್ಯವಹರಣೆಯನ್ನು ನಿಲ್ಲಿಸಿಡಬೇಕೆಂದಾಗಲಿ ಕೇಳಬಹುದು.

ಆಪಾದಿಸಲ್ಪಟ್ಟ ಮನುಷ್ಯನು ಒಪ್ಪಿಸಲ್ಪಡಬೇಕೆಂದು ಕೇಳಲು ಕ್ರಿಮಿನಲ್ ಕೋರ್ಟಿಗೆ ಅಧಿಕಾರ.

(2) ಅಂಥಾ ಪ್ರತಿ ಸಂದರ್ಭದಲ್ಲಿಯೂ ಸದರಿ ಆಫಿಸರು ಆಪಾದಿಸಲ್ಪಟ್ಟ ಮನುಷ್ಯನನ್ನು ಸದರಿ ಕೋರಿಕೆಯ ಮೇರೆ ಒಪ್ಪಿಸಿಬಿಡತಕ್ಕದ್ದು ಅಥವಾ ಸದರಿ ವ್ಯವಹರಣೆಯು ಕೋರ್ಟಿನ ಮುಂದೆ ನಡೆಯಬೇಕೆ, ಅಧಿಕಾರಿಯ ಮುಂದೆ ನಡೆಯಬೇಕೆ ಎಂಬ ಅಂಶವನ್ನು ತೀರ್ಮಾನದ ಬಗ್ಗೆ ಸರ್ಕಾರದವರಿಗೆ ಆ ಕೂಡಲೆ ತಿಳುಹಿಸಿ ಅಲ್ಲಿನವರಿಗೆ ಆಪಾದಿಸಲ್ಪಟ್ಟ ಮನುಷ್ಯನ ಮೇಲೆ ವ್ಯವಹರಣೆಗಳನ್ನು ನಿಲ್ಲಿಸಿಡತಕ್ಕದ್ದು.

ಹೀಗೆ ತಿಳುಹಿಸಿದುವರ ಮೇಲೆ ಸರ್ಕಾರದವರ ಹುಕುಮು ಅಖೈರಿನದಾಗಿರತಕ್ಕದ್ದು."

ವಿ. ಪಿ. ಮಾಧವರಾವ್,
ದೀವಾ.

ತಾರೀಖು 30ನೆ ನವಂಬರ್ 1907.

ನಂ. ಜು. 1683—ಲೆಜಿಸ್. 10—07-1, 1903ನೆ ಇಸವಿಯ ಸೆಪ್ಟಂಬರ್ 9ನೆ ತಾರೀಖಿನ 30—ಲೆಜಿಸ್. 4—03ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಘಾಯಿಷ್ ಮಾಡಿದ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮೇರೆಗೆ ಮಾಡಿದ ನಿಬಂಧನೆಗಳ 65ನೆ ನಿಬಂಧನೆಗೆ ಇದರಡಿ ಕಂಡುದನ್ನು ಸೇರಿಸಬೇಕೆಂದು ಮೈಸೂರು ಕ್ರೀವನ್ಮಹಾರಾಜರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

"(೪) ಪ್ರಯಾಣದ ಭತ್ಯಕ್ಕೆ ಅರ್ಹರಲ್ಲವೆಂದು ಅವರವರ ಮೇಲ್ಪಟ್ಟ ಅಧಿಕಾರಿಗಳಿಂದ ಸರ್ಟಿಫೈ ಮಾಡಲ್ಪಟ್ಟು ಸರ್ಕಾರಿ ಕೆಲಸದಮೇಲೆ ಪ್ರಯಾಣ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಸೇರಿದ."

ಹುಕುಂ ಬಮೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.